ಆರಂಭಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?

ಅ) ಜಿಲ್ಲಾ ಕೇಂದ್ರಕ್ಕೆ ಹೈಟೆಕ್ ಬಸ್ಸುಗಳ ಸೌಕರ್ಯ ಕಲ್ಪಿಸಲಾಗಿದೆಯೇ? (ವಿವರ ನೀಡುವುದು)

ಉತ್ತರ

ಅ ಚಾಮರಾಜನಗರ ಜಿಲ್ಲೆಯು ರಾಷ್ಟ್ರೀಕೃತಗೊಂಡಿರುವುದಿಲ್ಲ ಹಾಲಿ ಗುಂಡ್ಲುಪೇಟೆ ಮತ್ತು ಕೊಳ್ಳೇಗಾಲದಲ್ಲಿ ಸಂಸ್ಥೆಯ ಘಟಕಗಳಿರುತ್ತವೆ ಆದುದರಿಂದ ಚಾಮರಾಜನಗರದಲ್ಲಿ ಘಟಕ ನಿರ್ಮಿಸುವ ಉದ್ದೇಶವು ಸಧ್ಯಕ್ಕೆ ಇರುವುದಿಲ್ಲ

ಖಾಸಗಿ ಪ್ರವರ್ತಕರು ಈ ಜಿಲ್ಲೆಯಲ್ಲಿ ಸಾರಿಗೆ ಸೌಕರ್ಯವನ್ನು ಕಲ್ಪಿಸಿರುತ್ತಾರೆ ಆದುದರಿಂದ ಚಾಮರಾಜನಗರ ಜಿಲ್ಲೆಯಲ್ಲಿ ನಗರ ಸಾರಿಗೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ

ಆ) ಹೌದು ಬೆಂಗಳೂರು-ಕೊಯಂಬತ್ತೂರು ವಯಾ ಚಾಮರಾಜನಗರ ನಡುವೆ ಎರಡು ಡಿಲಕ್ಸ್ ಬಸ್ಸುಗಳು ಕಾರ್ಯಾಚರಣೆಗೊಳ್ಳುತ್ತಿವೆ ಮತ್ತು ಮಂಗಳೂರು, ಕೊಯಂಬತ್ತೂರು ನಡುವೆ ಒಂದು ಡೀಲಕ್ಸ್ ಬಸ್ ಕಾರ್ಯಾಚರಣೆಗೊಳ್ಳುತ್ತಿರುತ್ತವೆ ಈ ಸಾರಿಗೆ ಸೇವೆಗಳಿಗೆ ಚಾಮರಾಜನಗರದಲ್ಲಿ ನಿಲುಗಡೆಯನ್ನು ಕಲ್ಪಿಸಲಾಗಿರುತ್ತದೆ ಸಾರ್ವಜನಿಕ ಪ್ರಯಾಣಿಕರು ಈ ಸೇವೆಗಳ ಉಪಯೋಗ ಪಡೆದುಕೊಳ್ಳಬಹುದಾಗಿದೆ

ಔರಾದ್ ಪಟ್ಟಣಕ್ಕೆ ಅಗ್ನಿಶಾಮಕ ಸೇವೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 45(465)

ಸದಸ್ಯರ ಹೆಸರು ಶ್ರೀ ಗುಂಡಪ್ಪ ವಕೀಲ್(ಔರಾದ್)

ಉತ್ತರಿಸುವ ಸಚಿವರು ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಪ್ರಶ್ನೆ

ಅ) ಬೀದರ್ ಜಿಲ್ಲೆ ಔರಾದ್ ಪಟ್ಟಣಕ್ಕೆ ಅಗ್ನಿಶಾಮಕ ಸೇವೆ ಘಟಕವನ್ನು ಪ್ರಾರಂಭಿಸಲು ಮಂಜೂರಾತಿ ದೊರೆತಿದೆಯೇ?

ಆ) ಮಂಜೂರಾತಿ ಯಾವಾಗ ದೊರೆಯಿತು, ಹಾಲಿ ಈಗ ಅಗ್ನಿಶಾಮಕ ಸೇವೆ

ನಡೆಯುತ್ತಿದೆಯೇ?

ಇ) ಇದಕ್ಕೆ ಬೇಕಾದ ಅಗ್ನಿಶಾಮಕ ವಾಹನ ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆಯೇ? ಹಾಗಿದ್ದಲ್ಲಿ ಈ ಸೌಲಭ್ಯಕ್ಕಾಗಿ ಅಧಿಕೃತವಾಗಿ ಕಚೇರಿಯನ್ನು ಪ್ರಾರಂಭಿಸದಿರಲು ಕಾರಣಗಳೇನು?

ಈ) 2-3 ಬಾರಿ ಪ್ರಾರಂಭೋತ್ಸವಕ್ಕೆ ಸಿದ್ದತೆ ನಡೆಸಿ ಮಧ್ಯದಲ್ಲಿ ನಿಂತು ಹೋಗಿರುವ ಸಂಗತಿ ನಿಜವೇ ಇದಕ್ಕೆ ಕಾರಣಗಳೇನು?

ಉ) ಸಾರ್ವಜನಿಕ ಹಿತದೃಷ್ಟಿಯಿಂದ ಉದ್ಘಾಟನೆಯನ್ನು ಯಾವಾಗ ಮಾಡಲಾಗುವುದು ತಿಳಿಸುವುದು?

ಉತ್ತರ

ಅ) ಹೌದು

ಆ) ಸರ್ಕಾರಿ ಆದೇಶ ಸಂಖ್ಯೆ ಒಇ 130 ಕಅಸೇ 95, ದಿನಾಂಕ 6-3-1996ರಲ್ಲಿ ಅಗ್ನಿಶಾಮಕ ರಾಣೆಯನ್ನು ತೆರೆಯಲು ಮಂಜೂರಾತಿ ನೀಡಲಾಗಿದೆ ಈ ಅಗ್ನಿಶಾಮಕ ರಾಣೆಯನ್ನು ಇನ್ನೂ ತೆರೆದಿರುವುದಿಲ್ಲ

ಇ) ಈ ರಾಣೆಗೆ ಬೇಕಾದ ಅಗ್ನಿಶಾಮಕ ವಾಹನವನ್ನು ಗುರುತಿಸಿ ಅಗ್ನಿಶಾಮಕ ಸೇವಾ ಕಾರ್ಯಗಾರದಲ್ಲಿ ಇಡಲಾಗಿದೆ ಸಿಬ್ಬಂದಿಗಳನ್ನು ರಾಣೆಯನ್ನು ಪ್ರಾರಂಭಿಸುವಾಗ್ಗೆ ನಿಯೋಜಿನಲಾಗುವುದು ಈಗ ಹಾಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ತಾತ್ಕಾಲಿಕ ಕಟ್ಟಡವನ್ನು ಒದಗಿಸಲಾಗಿದೆ ರಾಣೆಯನ್ನು ಸಧ್ಯದಲ್ಲಿಯೇ ಪ್ರಾರಂಭಿಸಲಾಗುವುದು

ಈ) ಆಡಳಿತಾತ್ಮಕ ಕಾರಣಗಳಿಂದ ಪ್ರಾರಂಭೋತ್ಸವವನ್ನು ನಿಲ್ಲಿಸಲಾಗಿದೆ

ಉ) ಸದ್ಯದಲ್ಲೇ ನಡೆಸಲಾಗುವುದು

ಪೋಲೀಸ್ ಸಿಬ್ಬಂದಿಗಳಿಗೆ ರಜೆ ಸೌಲಭ್ಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 46(78)

ಸದಸ್ಯರ ಹೆಸರು ಶ್ರೀ ಸದಾನಂದಗೌಡ ಡಿ ವಿ.(ಪುತ್ತೂರು)